# ಆಚಾರಿಯರೆಂಬವರ ಇವರ ನೋಡಿ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 73.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 38.
3. **Note:** This song is not available in the books of Shri Betageri Krishna Sharma and Shri Bengeri Huchha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1 with few minor differences which are not considered here.

ರಾಗ: ಮುಖಾರಿ ತಾಳ: ಅಟ

ಆಚಾರಿಯರೆಂಬವರ ಇವರ ನೋಡಿ || ಪ ||
ಆಚಾರ ಬಲ್ಲವರೆ ಆಚಾರಿಯರು || ಅಪ ||

ಆ ಎಂದರೆ ಅತಿ ತತ್ವವ ತಿಳಿದವರು
ಅದ್ವೈತ ಮತ ಧ್ವಂಸ ಮಾಡುವರು
ಅತಿಥಿ ಅಭ್ಯಾಗತರಿಗೆ ಅನ್ನವನ್ನ ಇಕ್ಕುವರು
ಆಯುತ ವೃತ್ತಿಯನ್ನ ಮಾಡುವರು || 1 ||

ಚಾ ಎಂದರೆ ಚಂಚಲಾತ್ಮವನೆ ಅಳಿದವರು
ಚೆನ್ನಾಗಿ ವೇದ ಶಾಸ್ತ್ರವನೆ ಓದಿದವರು
ಚಲನೆಯಿಲ್ಲದೆ ಗುರು ಹಿರಿಯರಿಗೆ ಎರಗುವರು
ಚಾನಸ ಬಿಟ್ಟವರು ಆಚಾರಿಯರು || 2 ||

ರು ಎಂದರೆ ಋಣವ ಮಾಡದಿದ್ದವರು
ರಿಪು ಮಿತ್ರ ಸಮರೆಂದು ನೋಡುವರು
ರೌಪ್ಯ ಸುವರ್ಣವನು ಮೃತ್ತಿಕೆಯೆಂದು ನೋಡುವರು
ರಮಾಧವ ಪುರಂದರ ವಿಠಲನ ಬಲ್ಲವರೇ ಆಚಾರಿಯರು || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಆಚಾರ್ಯ ಎನ್ನುವ ಮಾತಿಗೆ ಅಕ್ಷರಗಳನ್ನು ಹಿಡಿದು ಅರ್ಥವನ್ನು ಹೇಳಿದ್ದಾರೆ.

**ಅತಿತತ್ವ** = ಎಲ್ಲಾ ತತ್ವಗಳಿಂದ ಮಿಗಿಲಾದ ತತ್ವ, ಹರಿ

**ಅಳಿದುಳಿದ ಮತ** = ದ್ವೈತ ಸಿದ್ಧಾಂತವನ್ನು, ಹರಿ ಸರ್ವೋತ್ತಮತ್ವವನ್ನು ಒಪ್ಪದ ಮತ.

**ಆಯುತ** = ಆಯುಕ್ತ, ತಮಗೆ ವಿಧಿಸಲ್ಪಟ್ಟ, ವಿಹಿತವಾದ, ವಿಸ್ತಾರವಾದ, ಉದ್ದವಾದ

**ಚಂಚಲಾತ್ಮವನೆ** = ಚಂಚಲವಾದ ಮನಸ್ಸು.

**ಚಲನೆಯಿಲ್ಲದ** = ಎಡೆಬಿಡದ

**ರಿಪು** = ಶತ್ರು, ಹಗೆ, ವೈರಿ

**ಚಾನಸ** = ?

**ರಮಾಧವ** = ಪ್ರೀತಿಯ ಮಾಧವ

**ರೌಪ್ಯ** = ಬೆಳ್ಳಿ, ರಜತದ

**Classification:** Keerthane
**Ankita:** purandara vittala
**Location:** NA
**Category:** Tatva Jnana, Jeevana Darshana,
**Sub-Category:** Achar, tatva, dwaita, anna, vrutti, veda, shastra, runa, shatru, mitra, bangara, Madhava,
**Pravachana:** NA
**Explanation:** Dr. A.B. Shamachar